# ಯಂತ್ರ ನಾಗರೀಕತೆ ಕುರಿತು ಶಿಶುನಾಳ ಶರೀಫರ ಚಿಂತನೆಗಳು

**ರವಿಶಂಕರ್ ಎ.ಕೆ.**

ಸಹಾಯಕ ಪ್ರಾಧ್ಯಾಪಕ, ಸಮಾಜ ವಿಜ್ಞಾನಗಳು ಮತ್ತು ಭಾಷಾ ವಿಭಾಗ, ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ, ಬೆಂಗಳೂರು.

**DOI: https://doi.org/10.5281/zenodo.17773579**

## ABSTRACT:

ಕನ್ನಡ ಸಾಹಿತ್ಯದಲ್ಲಿ ಸುದೀರ್ಘ ಇತಿಹಾಸವನ್ನು ಹೊಂದಿರುವ ತತ್ವಪದಗಳ ಮರು ಓದು, ಚಿಂತನೆ ಹಾಗೂ ತೌಲನಿಕ ಹೊಸ ನೋಟಗಳು ಈ ಕಾಲದ ಅಧ್ಯಯನವಾಗಿದೆ. ತತ್ವಪದಕ್ಕೆ ಹೊಸ ವ್ಯಾಖ್ಯಾನಗಳನ್ನು ಸೃಷ್ಟಿಸಿಕೊಳ್ಳುತ್ತಾ ನೂರಾರು ತತ್ವಪದಕಾರರ ಒಳನೋಟಗಳ ದರ್ಶನ ಪಡೆಯುವುದು ಭಾರತೀಯ ಸಾಹಿತ್ಯ ಹಾಗೂ ಪಾಶ್ಚಾತ್ಯ ಸಾಹಿತ್ಯಗಳ ಕರ್ತವ್ಯವಾಗಿದೆ. ಈ ಸಾಹಿತ್ಯವು ಆಯಾ ಕಾಲದ ಆಧುನಿಕ ಪ್ರವೇಶಗಳಿಗೂ ಮುಖಾಮುಖಿಯಾಗಿರುವುದನ್ನು ಗಮನಿಸಬಹುದು. 'ಕಾಲ' ಹಾಗೂ 'ಮನಸ್ಸು'ಗಳ ಕುರಿತು ಜೀವ-ನಿರ್ಜಿವಗಳ ಒಡನಾಟವು ಕಾಲಾತೀತವಾಗಿ ಲೋಕಜ್ಞಾನವಾದ ಚಿಂತನೆಗಳು ತತ್ವಪದಗಳಲ್ಲಿ ಮೂಡಿಬಂದವು. ಯಂತ್ರ ನಾಗರೀಕತೆಯನ್ನು ಶಿಶುನಾಳ ಶರೀಫರ ತತ್ವ ಚಿಂತನೆಯು ಹೇಗೆ ಗ್ರಹಿಸಬಲ್ಲದು ಎಂಬುದೇ ಇಲ್ಲಿಯ ಅಧ್ಯಯನ. ಈ ದೃಷ್ಟಿಕೋನದ ಹಿನ್ನಲೆಯಲ್ಲಿ ಶಿಶುನಾಳ ಶರೀಫರ ತತ್ವಪದಗಳ ಒಳನೋಟಗಳನ್ನು ವರ್ತಮಾನದ ಕಾಲಪ್ರಜ್ಞೆಗಳೊಂದಿಗೆ ಅಧ್ಯಯನಮಾಡಬಹುದು.

## KEYWORDS:

ಲೋಕಜ್ಞಾನ, ತತ್ವಪದ, ವರ್ತಮಾನ, ಜಾಗತೀಕರಣ, ವಸಾಹತುಶಾಹಿ, ಆಧುನಿಕ, ನೆಲಮೂಲ ಸಂಸ್ಕೃತಿ.

ಈ ತತ್ವಪದಗಳ ಪರಂಪರೆ ಕುರಿತು ಡಾ. ಮಂಜುಳಾ ಮಲ್ದಾರಿ ಅವರ ಬರಹವನ್ನು ಮೊದಲಿಗೆ ಉಲ್ಲೇಖಿಸಬಹುದು. "ತತ್ತ್ವಪದಗಳು ಯಾವ ಧರ್ಮದ ಹಿನ್ನೆಲೆಯನ್ನು ಹೊಂದದೇ, ಜಾತಿ, ಮತ, ಪಂಥದ ಸೀಮಿತಕ್ಕೆ ಒಳಗಾಗದೆ ಬಯಲು ನೆಲದ ಬದುಕನ್ನು ಕುರಿತು ಹಾಡಿನ ಪದಗಳಾಗಿವೆ. ವೀರಶೈವ ಧರ್ಮದ ಸಿದ್ಧಾಂತಕ್ಕೆ ಮೀಸಲಾದ ಸ್ವರವಚನಗಳು ಶರಣರ, ಶಿವಯೋಗಿಗಳ ಸಾಂಸ್ಕೃತಿಕ, ಆಧ್ಯಾತ್ಮಿಕ ಬದುಕಿನ ದರ್ಶನಗಳಾದರೆ, ಕೆಳವರ್ಗದವರ ಆಧ್ಯಾತ್ಮಿಕ ಗೀತೆಗಳಾದ ತತ್ತ್ವಪದಗಳು ಜನಸಾಮಾನ್ಯರ ಅಂತರಂಗದ ಅರಿವಿನ ತೆರೆದ ಬಾಗಿಲದಂತಿವೆ. ಸ್ವರವಚನಗಳಲ್ಲಿ ವೇದ, ಆಗಮ, ಶಾಸ್ತ್ರಗಳಲ್ಲದೆ ಶರಣರ ಶಿಷ್ಟ ಪದ್ಧತಿಯಲ್ಲಿ ನಡೆದ ತತ್ತ್ವ ಚಿಂತನೆಯಿದೆ. ತತ್ತ್ವಪದಗಳಲ್ಲಿ ದಿನ ನಿತ್ಯದ ನೋವು ನಲಿವಿನ, ಸಂತೆ-ಸಂಭ್ರಮದ, ಜಾತ್ರೆ-ಕ್ಷೇತ್ರದ, ಹಬ್ಬ-ಹುಣ್ಣಿಮೆಯ, ದೇವರು-ದೈವದ ಜೀವನದ ರೀತಿ-ನೀತಿ, ಆಚರಣೆ ಮೊದಲಾದ

ಸನ್ನಿವೇಶಗಳ ಹಿನ್ನೆಲೆಯಲ್ಲಿ ಬದುಕನ್ನು ಅರಿಯುವ, ಆಚರಿಸುವ ಕೊನೆಗೆ ದೈವ ಸನ್ನಿಧಿಯಲ್ಲಿ ಸಮರ್ಪಿಸುವ ಮುಗ್ಧ ಭಾವವನ್ನು ಕಾಣುತ್ತೇವೆ. ತತ್ತ್ವಪದಗಳು ಪರಂಪರಾನುಗತವಾದ ಜ್ಞಾನ, ವಿಸ್ತಾರವಾದ ಲೋಕಾನುಭವ, ಬದುಕಿನ ಬಗೆಗಿನ ಸೂಕ್ಷ್ಮ ಚಿಂತನೆ. ಮೌಲ್ಯಗಳ ಹುಡುಕಾಟವನ್ನು ದಿನನಿತ್ಯದ ಅನುಭವದಲ್ಲಿ ಸರಳವಾಗಿ ಕಂಡುಕೊಂಡು. ಆಡುಭಾಷೆಯಲ್ಲಿಯೇ ಪ್ರತಿಪಾದಿಸುವ ಸಹಜ ಗುಣ ಹೊಂದಿವೆ. ತಪ್ಪನ್ನು ತಿದ್ದುವ, ಅನ್ಯಾಯವನ್ನು ಖಂಡಿಸುವ ಮಾನವ ಸಹಜ ಅಭಿವ್ಯಕ್ತಿಗಳಾದ ಆವೇಶ, ರೋಷ, ಮೂದಲಿಕೆ, ಬೈಗುಳ, ನಿಷ್ಠುರತೆ, ಸಾತ್ವಿಕತೆ ಮೊದಲಾದವುಗಳನ್ನು ತಟ್ಟುವ ಆತ್ಮೀಯ ಭಾಷೆ-ಭಾವಗಳನ್ನು ತತ್ತ್ವಪದಗಳಲ್ಲಿ ಕಾಣುತ್ತೇವೆ."[1]

ಈ ಹಿನ್ನಲೆಯ ಮೂಲಕ ಗಮನಿಸಿದರೆ ಶರೀಫರ ತತ್ವಪದಗಳು ವರ್ತಮಾನದ ದೃಷ್ಟಿಕೋನಕ್ಕೆ ಕನ್ನಡಿ ಹಿಡಿದಂತಿವೆ. ಬ್ರಿಟೀಷರ ಆಡಳಿತದಲ್ಲಿ ಯಂತ್ರಗಳ ಆಗಮನವು ಇಡೀ ಭಾರತಕ್ಕೆ ವಿಶೇಷ ಹಾಗೂ ಕುತೂಹಲ ಸಂಗತಿಗಳನ್ನು ಹಬ್ಬಿಸಿತು. ಇದೇ ಸಂದರ್ಭದಲ್ಲಿ ಈ ಯಂತ್ರಗಳನ್ನು ತತ್ವಪದಕಾರರು ಹೇಗೆ ನೋಡಿದ್ದಾರೆ ಎಂಬುದಕ್ಕೆ ತಕ್ಕುದಾದ ಒಂದು ಪದವು ಇಲ್ಲಿದೆ. ಹುಬ್ಬಳಿಯ ಪ್ರಾಂತ್ಯಕ್ಕೆ ಆಗ ತಾನೇ ಆಗಮಿಸಿದ ಹತ್ತಿ ಗಿರಣಿಯ ಕಂಡು ಶರೀಫರು ತನ್ನ ಸಖಿಗೆ ಹೇಳುವ ನುಡಿಯಂತೆ ಒಂದು ಪದ ಕಟ್ಟಿದ್ದಾರೆ. ಆ ಸಖಿಯು ವರ್ತಮಾನದ ಎಲ್ಲಾ ಮನಸ್ಸುಗಳು, ದೇಸಿಯ ಬೇರುಗಳು ಎಂಬುದನ್ನು ಮರೆಯುವಂತಿಲ್ಲ. ಇವರ ತತ್ವಪದಗಳು ಅತಿ ಹೆಚ್ಚು ಕಾಂತಾ ಸಂಹಿತೆಯಲ್ಲಿ ಮೂಡಿರುವುದನ್ನು ಉಲ್ಲೇಖಿಸಬಹುದು. ಯಂತ್ರನಾಗರೀಕತೆಯ ಸ್ವರೂಪದ ಜಾಗತೀಕರಣ ಪ್ರವೇಶವನ್ನು ಶರೀಫರು ತತ್ವಪದಗಳ ಮೂಲಕ ಸಮಾಜಕ್ಕೆ ಪರಿಚಯಿಸಿದರು. ಮನುಷ್ಯನ ಕಾರ್ಯಗಳನ್ನು ಅತ್ಯಂತ ವೇಗವಾಗಿ ನಿರ್ವಹಿಸುವ ಈ ಯಂತ್ರಗಳ ಪ್ರವೇಶವನ್ನು ಅಂದಿನ ಸಮಾಜ ಯಾವ ರೀತಿಯಲ್ಲಿ ಸ್ವೀಕರಿಸಿರಬಹುದು? ಪ್ರತಿಕ್ರಿಯೆಗಳೇನು ಈ ಎಲ್ಲಾ ಪ್ರಶ್ನೆಗಳಿಗೆ 19-20ನೇ ಶತಮಾನದ ಕಾದಂಬರಿ, ಕಥೆಗಳಲ್ಲಿ ಕುತೂಹಲಾತ್ಮಕವಾಗಿ ಚಿತ್ರಿಸಲಾಗಿದೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯು ಸೈಕಲ್ ಪ್ರವೇಶವನ್ನು ಪಾದ್ರಿಗಳ ಮೂಲಕ ತರುವ ಜೊತೆಗೆ ಮಲೆನಾಡಿನ ಬಡವ-ಶ್ರೀಮಂತರೆಲ್ಲರ ಕುತೂಹಲಗಳನ್ನು ಚಿತ್ರಿಸುತ್ತಾರೆ. ಈ ಅಂಶವು ಇಡೀ ಭಾರತದಲ್ಲಿಯೇ ವಿವಿಧ ಮಾದರಿಗಳಲ್ಲಿ ತಲ್ಲಣಗೊಳಿಸಿರಬಹುದು. ಆದರೆ, ಇಂದು ಯಂತ್ರ ನಾಗರೀಕತೆಯೊಳಗೆ ಸಿಲುಕಿರುವ ಮನುಷ್ಯನಿಗೆ ದೇಸಿಪ್ರಜ್ಞೆಗಳು, ನೆಲಮೂಲ ಸಂಸ್ಕೃತಿಗಳೇ ಅತ್ಯಂತ ಕುತೂಹಲಗಳಾಗಿವೆ. ಇಂದಿನ ಯುವಪೀಳಿಗೆ ಕಣ್ಣರಳಿಸಿ ನೋಡುವ ವಿರುದ್ಧಮುಖಿ ನೆಲೆಗಳನ್ನು ಅಧ್ಯಯನಮಾಡಬಹುದು.

ಶರೀಫರು ಅಂದಿನ ವರ್ತಮಾನ ತಲ್ಲಣಗಳನ್ನು ಯೋಗಜ್ಞಾನದ ಮೂಲಕ ವಿವರಿಸಿದ್ದು ವಿಶೇಷ. ಯೋಗ ಸಾಧನೆಯಿಂದ ಕುಂಡಲೀನಿ ಶಕ್ತಿ ಜಾಗೃತಗೊಳ್ಳುವ ಅಂಶವನ್ನು ಗಿರಣಿಯ ವಿಸ್ತಾರದಲ್ಲಿ ಅದರ ಕಾರ್ಯದಲ್ಲಿ ಉಲ್ಲೇಖಿಸುತ್ತಾರೆ.

**ಗಿರಣಿ ವಿಸ್ತಾರ ನೋಡಮ್ಮ**
**ಶರಣಿ ಕೂಡಮ್ಮ ॥ಪಲ್ಲ॥**
**ಧರಣಿಪತಿಯು ರಾಣಿ**
**ಕರುಣಾಕ ರಾಜ್ಯಕೆ**
**ತರಿಸಿದ ಘನಚೋದ್ಯವೋ ಚೀನಾದ ವಿದ್ಯವೋ ॥ಪ.॥**

ಈ ಪದದಲ್ಲಿ ಉಲ್ಲೇಖವಾಗುವ ಗಿರಣಿ ಮತ್ತು ಶರಣಿ ಪದಗಳು ಒಳಲೋಕಗಳಾದರೆ, ರಾಣಿ ಹಾಗೂ ಚೀನಾ ವಿದ್ಯವು ಹೊರಲೋಕಗಳಾಗಿವೆ. ಗಿರಣಿ ಎಂಬ ಎಂಬುದು ಸ್ಥಳೀಯ ಭೂಮಿಯನ್ನು ಪ್ರಕೃತಿಯನ್ನು ಸೂಚಿಸಿದರೆ, ಶರಣಿ ಎಂಬುದು ಉತ್ತರ ಕರ್ನಾಟಕದ ದೇಸಿ ಪ್ರಜ್ಞೆಯನ್ನು ದಾಖಲಿಸುತ್ತಿದೆ. ಸ್ಥಳೀಯ ಪ್ರಜ್ಞೆಯ ಸಮುದಾಯಕ್ಕೆ ಈ ಪದವನ್ನು ಉಲ್ಲೇಖಿಸಿದ್ದಾರೆ. ಒಂದು ಪದದೊಳಗೆ(ಹಾಡು) ವಿಶಾಲ ತತ್ವವನ್ನು ಉಲ್ಲೇಖಿಸುವ ಕಾಲಧರ್ಮವು ತತ್ವಪದಗಳ ಚಿಂತನೆಯಾಗಿದೆ. ಗಿರಣಿಯು ಯಂತ್ರನಾಗರೀಕತೆಯ ಪ್ರಾರಂಭದ ಕೊಡುಗೆ. ಅದರ ಸ್ವರೂಪ, ಲಕ್ಷಣ, ರಚನೆಗಳ ಕುತೂಹಲವನ್ನು ಇಲ್ಲಿ ಶರಣಿಗೆ ತಿಳಿಸಲಾಗುತ್ತಿದೆ. ಕಳೆದ ಶತಮಾನದವರೆಗೂ ಮನೆಗಳಲ್ಲಿ ಹೆಂಗಸರಿಗೆ ಮುಂಜಾನೆಯಿಂದ ರಾತ್ರಿಯ ತನಕ ಹತ್ತಾರು ಕೆಲಸಗಳಲ್ಲಿ ಬೀಸುವ ಕಲ್ಲಿನೊಡನಾಟವೂ ಒಂದಾಗಿತ್ತು.

**ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗಿಯ**
**ಜಲ್ಲಜಲ್ಲಾನೆ ಉದುರಮ್ಮ। ನಾ ನಿನಗೆ**
**ಬೆಲ್ಲಾದಾರತಿಯಾ ಬೆಳಗೇನು॥**
**ಅಂದುಳ್ಳ ಅಡಿಗಲ್ಲು ಚಂದುಳ್ಳ ಮೇಗಲ್ಲು**
**ಚಂದ್ರಮತಿಯೆಂಬ ಹಿಡಿಗೂಟ । ಹಿಡಕೊಂಡು**
**ತಂದೆ ತಾಯಿಗಳ ನೆನೆದೇನ ॥**

ಈ ಮೇಲ್ಕಂಡ ಜನಪದರ ಹಾಡುಗಳಲ್ಲಿ ಬೀಸುವ ಕಲ್ಲಿನೊಂದಿಗೆ ಹೆಣ್ಣು ಹೊಂದಿದ್ದ ಭಾವನಾತ್ಮಕ ಸಂಬಂಧ ಹಾಗೂ ಬೀಸುವ ಕಲ್ಲಿನ ಸ್ವರೂಪ ಎಲ್ಲವನ್ನೂ ತಮ್ಮ ಪದಗಳ ಮೂಲಕ ದಾಖಲಿಸಿದ್ದರು. ಇವುಗಳನ್ನು ಹಾಡುತ್ತಾ ತಮ್ಮ ಕಾರ್ಯ, ಕಾರ್ಯಕ್ಕೆ ಕಾರಣವಾದ ವಸ್ತು ಎಲ್ಲವನ್ನೂ ಪೂಜಿಸುತ್ತಾ, ಗೌರವಿಸುತ್ತಾ ಸಾಗುತ್ತಿದ್ದ ಅವರ ಬಾಂಧವ್ಯದಲ್ಲಿ ಒಂದು ಜೀವನ ಪ್ರೀತಿಯ ಬದುಕು ಅಡಗಿತ್ತು. ಈ ಬದುಕಿಗೆ ಆಧುನಿಕತೆಯ ಪ್ರವೇಶವು ಎಷ್ಟೆಲ್ಲಾ ಕುತೂಹಲ ಉಂಟುಮಾಡಿರಬಹುದು ಎಂಬ ಜಿಜ್ಞಾಸೆಗೆ ಈ ತತ್ವಪದ ಸಾಕ್ಷಿಯಾಗಿದೆ. ಗಿರಣಿಯ ವಿಸ್ತಾರವು ಬಂದ ಮೇಲೆ ಬೀಸುವ ಕಲ್ಲಿನೊಡನಾಟದ ಶರಣಿಯು ಕೆಲಸವಿಲ್ಲದೆ ಕೂರುವ ಸೂಚನೆಯ ಮೂಲಕ ಈ ಪದ ಪ್ರಾರಂಭವಾಗಿದೆ. 19ನೇ ಶತಮಾನದಲ್ಲಿ ವಿಕ್ಟೋರಿಯಾ ರಾಣಿ ಇಡೀ ಭೂಮಿಗೆ ಅಧಿಪತಿಯಂತೆ ಆಳ್ವಿಕೆ ಮಾಡುತ್ತಿದ್ದರು. ಅವರ ಆಳ್ವಿಕೆಯ ರಾಜ್ಯಗಳಿಗೆ ಈ ಯಂತ್ರ, ವಿದ್ಯುತ್, ಮುದ್ರಣ, ರೈಲು ಮೊದಲಾದಂತೆ ತಮ್ಮ ಕಾರ್ಯಗಳಿಗೆ ಅನುಕೂಲವಾಗುವ ರೀತಿಯಲ್ಲಿ ಹೊಸ ಆಯಾಮಗಳನ್ನು ಪರಿಚಯಿಸಿದರು. ಇವುಗಳನ್ನು 'ಘನಚೋದ್ಯ'

ವೆಂದು ಕರೆದಿದ್ದಾರೆ. ಸಾಕಷ್ಟು ಕುತೂಹಲಗಳನ್ನು, ವಿಸ್ಮಯಗಳನ್ನು ಸಾವಿರಾರು ಪ್ರಶ್ನೆಗಳ ಮೂಲಕ ಭಾರತೀಯರು ಸ್ವಾಗತಿಸಿದ್ದಾರೆ. ಇದು ಚೀನಾದ ವಿದ್ಯೆಯೆನ್ನುವ ಮೂಲಕ ಇಂತಹ ಯಂತ್ರಗಳ ತಯಾರಿಕೆಯು, ವರ್ಗಾವಣೆಯು ಚೀನಾ ದೇಶದ ಕಾರ್ಯವೆಂದು ಗುರ್ತಿಸಬಹುದು.

ಈ ಭಾಗದಲ್ಲಿ ಕೆಲವು ಇತಿಹಾಸದ ವಿಚಾರಗಳನ್ನು ಪರಿಶೀಲಿಸಬಹುದು. 1817ರಲ್ಲಿ ಹಳೆಯ ಹುಬ್ಬಳ್ಳಿಯನ್ನು ಸಾಂಗ್ಲಿ ಸಂಸ್ಥಾನಿಕರು ಬ್ರಿಟೀಷರಿಗೆ ಮಾರಿದರು. 1830ರಲ್ಲಿ ಮುಂಬಯಿ ಪ್ರಾಂತ್ಯದ ಭಾಗವಾಗಿ ಧಾರವಾಡ ಜಿಲ್ಲೆ ನಿರ್ಮಾಣವಾಯಿತು. 1857ರಲ್ಲಿ ನಡೆದ ಯುದ್ಧಗಳ ನಂತರ ವಿಕ್ಟೋರಿಯಾ ರಾಣಿಯನ್ನು ಭಾರತದ ಚಕ್ರವರ್ತಿಯಾಗಿ ಘೋಷಿಸಲಾಯಿತು. ಈ ವೇಳೆಗೆ ಪ್ರಪಂಚದ ಸಾಕಷ್ಟು ದೇಶಗಳು ಬ್ರಿಟೀಷರ ಆಧಿಪತ್ಯಕ್ಕೆ ಒಳಗಾಗಿದ್ದವು. ಆದ್ದರಿಂದ ಅಧಿಪತಿ ಎಂದಿದ್ದಾರೆ. ಬ್ರಿಟಿಷರು ಭಾರತೀಯ ಕೃಷಿ ಪದ್ಧತಿಯ ಮೇಲೆ ಬೀರಿದ ಪರಿಣಾಮಗಳನ್ನು ಈ ರೀತಿಯಲ್ಲಿ ಉಲ್ಲೇಖಿಸಬಹುದು.

"ಬ್ರಿಟಿಷರು ಎಲ್ಲ ರೀತಿಯಿಂದಲೂ ನಮ್ಮನ್ನು ಶೋಷಣೆಗೈದರು. ಹಳ್ಳಿಗಳನ್ನೊಳಗೊಂಡ ಬೃಹತ್ ದೇಶವಾದ ಭಾರತದಲ್ಲಿ ವ್ಯವಸಾಯವೇ ಪ್ರಧಾನ ಉದ್ಯೋಗವಾಗಿತ್ತು. ಸರ್ಕಾರದ ಆದಾಯದ ಪ್ರಮುಖ ಮೂಲ ಭೂಕಂದಾಯವಾಗಿತ್ತು. ಕೃಷಿ ಕ್ಷೇತ್ರದಲ್ಲಿ ಆಹಾರ ಧಾನ್ಯಕ್ಕಿಂತ ವಾಣಿಜ್ಯ ಬೆಳೆಗಳನ್ನು ಹೆಚ್ಚು ಬೆಳೆಯಲಾಗುತ್ತಿತ್ತು. ಆದರೆ ಭೂಕಂದಾಯವನ್ನು ಮಾತ್ರ ರೈತರು ಬ್ರಿಟಿಷರಿಗೆ ನಗದು ರೂಪದಲ್ಲಿ ಕೊಡಬೇಕಾಗಿತ್ತು. ತೆರಿಗೆಯನ್ನು ಭರಿಸುವ ಬಡ ರೈತರ ಕಷ್ಟವನ್ನು ಶರೀಫರ "ರಾಜನೀತಿಯಲ್ಲಿ ಜಯವು" ಎಂಬ ಪದ್ಯದಲ್ಲಿ ಕಾಣ ಬಹುದಾಗಿದೆ.

**"ಹಿಂದೂಸ್ಥಾನಕ ಬಂತು ಶೋಕ**
**ಮಂದಿಗಾಯ್ತು ಅತಿದುಃಖ**
**ಹಣದ ತೆರಿಗೆಯು ತಲೆಗೆ ಏಳು**
**ಎಣಿಸಿ ಹಡಗ ತುಂಬಿ ಹವಳವ**
**ಹೂಣಾದ ದೇಶಕೆಲ್ಲ ಇದು ಕುಣಿದು ಕುಣಿದು ದಣಿವು ಆದಿತು"**

'ತಲೆಗೆ ಏಳು ಎಣಿಸಿ' ಎಂಬ ಶಬ್ದಗಳಲ್ಲಿ ಆದಾಯಕ್ಕಿಂತ ತೆರಿಗೆಯನ್ನು ಹೆಚ್ಚು ಕೊಡಬೇಕಾದ ಪರಿಸ್ಥಿತಿಯನ್ನು ಜನ ಅನುಭವಿಸಿದನ್ನು ಹೇಳಿದ್ದಾರೆ. ಈ ಹಣದಿಂದ ಫಿರಂಗಿಯವರು ಐಷಾರಾಮ ಜೀವನ ಸಾಗಿಸುವುದರ ಜೊತೆಗೆ ಐಶ್ವರ್ಯವನ್ನು ಶೇಖರಿಸಿ ಶೇಖರಿಸಿ ದಣಿದರೆಂದು ಅಂದಿನ ರಾಜಕೀಯ ಸ್ಥಿತಿಯನ್ನು ಕುರಿತು ತಮ್ಮ ಪದದಲ್ಲಿ ಅನುಭವಿಸಿ ಹಾಡಿದ್ದಾರೆ.

ಬ್ರಿಟಿಷರು ಭಾರತದಲ್ಲಿ ಜಾರಿಗೆ ತಂದ ಆರ್ಥಿಕ ನೀತಿಗಳು ಭಾರತೀಯರ ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ವಿರುದ್ಧವಾಗಿದ್ದವು. ಆ ಮೂಲಕ ಭಾರತೀಯರನ್ನು

ಶೋಷಿಸಿದರು. ಭಾರತದಲ್ಲಿ ಗಟ್ಟಿಯಾಗಿ ನೆಲೆಯೂರಿದ ಈಸ್ಟ್ ಇಂಡಿಯಾ ಕಂಪನಿ. ತನ್ನ ಅಧಿಕಾರವನ್ನು ಚಲಾಯಿಸಿ ಭಾರತದ ಕೈಗಾರಿಕೆ ಮತ್ತು ಕರಕುಶಲ ಕಲೆಯನ್ನು ನಾಶಪಡಿಸಿ, ಆಮದು ಆಗುವ ವಸ್ತುಗಳಿಗೆ ಹೆಚ್ಚು ಪ್ರೋತ್ಸಾಹ ನೀಡಿದರು. ಬ್ರಿಟಿಷರು ತಮ್ಮ ಸಿದ್ಧವಸ್ತುಗಳನ್ನು ಭಾರತಕ್ಕೆ ತರುವುದರಿಂದ ಮತ್ತು ಆಮದು ವಸ್ತುಗಳಿಗೆ ತೆರಿಗೆ ವಿಧಿಸದೆ ಭಾರತೀಯ ವ್ಯಾಪಾರವನ್ನು ಹಾಗೂ ಭಾರತೀಯ ಹತ್ತಿ ಬಟ್ಟೆ ಉತ್ಪಾದನೆಯನ್ನು ನಾಶಪಡಿಸಿದರು.

ಬ್ರಿಟಿಷರು ಭಾರತದ ಕಚ್ಚಾವಸ್ತುಗಳನ್ನು ಕಡಿಮೆ ಬೆಲೆಗೆ ಕೊಂಡು ತಮ್ಮ ಕೈಗಾರಿಕೆಗಳಿಗೆ ರವಾನಿಸಿ, ಇಂಗ್ಲೆಂಡಿನಲ್ಲಿ ಸಿದ್ಧವಾದ ವಸ್ತುಗಳಿಗೆ ಭಾರತದಲ್ಲಿ ಹೆಚ್ಚಿನ ಬೆಲೆಗೆ ಮಾರುವ ತಂತ್ರದಿಂದಾಗಿ ಗ್ರಾಮೀಣ ಗೃಹ ಕೈಗಾರಿಕೆಗಳು ಅವನತಿ ಹೊಂದಿದವು."[2]

19ನೇ ಶತಮಾನದಲ್ಲಿ ಸಕ್ಕರೆ ರೇಷಿಮೆ ಮೊದಲಾದಂತೆ ಚೀನಾದಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ಇದೇ ಕಾಲದಲ್ಲಿ ಅಮೇರಿಕಾದಿಂದ ಬಂದ ಹತ್ತಿಯ ಬೆಳೆಯು ಭಾರತದ ಬಯಲು ಸೀಮೆಗಳ ಉದ್ಯೋಗವಾಯಿತು. ಈ ಹತ್ತಿ ಹಿಂಜಲು ಬಂದ ಯಂತ್ರಗಳೇ ಮೊದಲ ಗಿರಣಿಗಳು. ಇವುಗಳ ಕುರಿತು ಉತ್ತರ ಕರ್ನಾಟಕದ ತಾಯ ದನಿಯಾಗಿ ಶರಣೆ ಇದನ್ನೆ ತಿಳಿಯಮ್ಮ ಎಂದಿದ್ದಾರೆ. 'ಕೂಡಮ್ಮ' ಎಂಬ ಪದವನ್ನು ಹಲವು ಅರ್ಥದಲ್ಲಿ ತಿಳಿಯಬಹುದು. ಗೃಹ ಕೈಗಾರಿಕೆ, ಮನೆಯ ಕಾಯಕ ಇಲ್ಲವಾಗಿ ಕೂರುವ ಪದವಾಗಿ ಕಾಣಬಹುದು. ಈ ಆಧುನಿಕ ಪ್ರವೇಶದ ವಿಚಾರ ತಿಳಿಯಮ್ಮ ಎಂಬುದಾಗಿ, ಸ್ಥಳೀಯತೆಯಿಂದ ಆಧುನಿಕ ಪ್ರವೇಶದೊಂದಿಗೆ ಜೊತೆಯಾಗು ಎಂಬ ಅರ್ಥದಲ್ಲಿ ಚರ್ಚಿಸಬಹುದು.

ಕಾಲಯಾನದಲ್ಲಿ ಆಧ್ಯಾತ್ಮ ಮನಕ್ಕೆ ಆಧುನಿಕ ಪ್ರವೇಶವು ತಂದೊಡ್ಡಿದ ನೂರಾರು ಚಿಂತನೆಗಳ ಸಾರ ವಿಚಾರವಿದು. ಈ ಗಿರಣಿಗಳು ಹೇಗೆ ಕೆಲಸಮಾಡುತ್ತವೆ. ಅವುಗಳ ಸ್ವರೂಪವೇನು ಎಂಬುದನ್ನು ಈ ಸಾಲುಗಳು ಚರ್ಚಿಸುತ್ತವೆ.

**ಜಲ ಅಗ್ನಿ ವಾಯು ಒಂದಾಗಿ**
**ಕಲೆತು ಚಂದಾಗಿ**
**ಜಲ ಅಗ್ನಿ ವಾಯು ಒಂದಾಗಿ**
**ನೆಲದಿಂದ ಗಗನಕ್ಕೆ ಮುಟ್ಟಿದಂತೆಸುವುದು**
**ಚಲುವ ಚನ್ನಿಗವಾದ ಕಂಭವೋ, ಹೊಗಿಯ ಬಿಂಬವೋ ॥1॥**

ಅಂದಿನ ಯಂತ್ರಗಳ ಚಲನೆಯು ಹಬೆಯ ಮೂಲಕ ನಡೆಯುತ್ತಿತ್ತು. ಕಲ್ಲಿದ್ದಲ ಮೂಲಕ ನೀರನ್ನು ಕಾಯಿಸಿ, ಈ ಬಾಯ್ಲರುಗಳ ಮೂಲಕ ಚಕ್ರಗಳು ತಿರುಗುವಂತೆ ನಿರ್ಮಿಸಲಾಗಿತ್ತು. ಇದು ನಮ್ಮ ರೈಲ್ವೆ ಮೊದಲಾದ ಕಡೆಯಲ್ಲೂ ಪ್ರಾರಂಭದ ಚಲನೆಯಾಗಿತ್ತು. ಈ ಕಾರ್ಯಕ್ಕೆ ನೀರು, ಅಗ್ನಿ, ವಾಯು ಮೂರು

ಒಂದಾಗಿ ಕಾರ್ಯವನ್ನು ಮಾಡಿದಾಗ ಮಾತ್ರ ಯಂತ್ರ ಪ್ರಾರಂಭವಾಗುತ್ತಿತ್ತು. ಆ ಯಂತ್ರದಿಂದ ಬರುವ ಹೊಗೆಯು ಭೂಮಿಯಿದ ಆಕಾಶದ ತನಕ ಚಾಚಿದಂತೆ ಸಾಗುತ್ತಿತ್ತು. ಅದಕ್ಕೆ ಎತ್ತರವಾದ ಕೊಳವೆ ಅದರಿಂದ ಹೊಗೆಯ ಚಲನೆ ಕಾಣುತ್ತಿತ್ತು. ಅದನ್ನು ಚೆಲುವ ಚೆನ್ನಿಗ ಕಂಭವೋ, ಹೊಗೆಯ ಬಿಂಬವೋ ಎಂದಿದ್ದಾರೆ.

ಕಾರ್ಖಾನೆಗಳ ಈ ಚಿತ್ರವು ಭವಿಷ್ಯದ ವಿನಾಶ ಸ್ವರೂಪವಾಗಿಯೂ, ಪರಿಸರ ನಾಶವಾಗಿಯೂ ಗೋಚರಿಸಿರಬಹುದು. ಅದರ ಪರಿಣಾಮಗಳು ಇಂದು ಕೆನ್ನೆಯಾಗಿ ಚಾಚಿ, ಯಂತ್ರನಾಗರೀಕತೆಯನ್ನು ಸೃಷ್ಟಿಸಿವೆ. ಮನುಷ್ಯನ ಪ್ರತಿ ಚಲನೆಯೂ ಯಂತ್ರಗಳನ್ನು ಅವಲಂಬಿಸಿರುವ ಪ್ರಕ್ರಿಯೆಯಲ್ಲಿ ಈ ಗಿರಣಿಯ ತತ್ವವು ಬಹು ಅರ್ಥಗಳನ್ನು ಧ್ವನಿಸುತ್ತದೆ.

ಈ ಪದವು ಭೌತಿಕ ಅರ್ಥಗಳಿಂದ ಬೌದ್ಧಿಕ ಆಯಾಮಗಳಿಗೆ ಸಾಗುತ್ತದೆ. ಮನುಷ್ಯನ ದೇಹ ಚಕ್ರವನ್ನು ಕುರಿತು ಹೀಗೆ ಚರ್ಚಿಸಿದ್ದಾರೆ.

**ಒಳಗೊಂದು ಬೇರೆ ಆಕಾರ**
**ತಿಳಕೋ ಚಮತ್ಕಾರ**
**ಒಳಗೊಂದು ಬೇರೆ ಆಕಾರ**
**ದಳಗಳೊಂಭತ್ತು ಚಕ್ರ ಸುಳಿವ ಸೂತ್ರಾಧಾರ**
**ಲಾಳಿ ಮೂರು ಕೊಳಿವಿಯೊಳು ಎಳೆ ತುಂಬುತದರೊಳು ॥2॥**

ಗಿರಣಿಯ ಕಾರ್ಯವನ್ನು ಹೇಳುತ್ತಲೇ ಮನುಷ್ಯನ ದೇಹ ಸ್ವರೂಪವನ್ನು ಕುರಿತು ಆಲೋಚಿಸುತ್ತಾರೆ. ಯಂತ್ರದ ಒಳಗಿನ ಆಕಾರವೇ ಬೇರೆಯಾಗಿರುತ್ತದೆ. ಅದರ ಚಮತ್ಕಾರವನ್ನು ತಿಳಿದಾಗ ಮಾತ್ರ ಜ್ಞಾನ ಮೂಡಬಹುದು. ನಮ್ಮ ದೇಹದೊಳಗಣ ಪ್ರತಿ ಕಾರ್ಯವೂ ಇಂದಿಗೂ ಯಕ್ಷಪ್ರಶ್ನೆಯಂತಿರುವ ಸೂಕ್ಷ್ಮಗ್ರಾಹಿ ಸಂಕಲನ. ಹತ್ತಿಯಿಂದ ನೂಲನ್ನು ತೆಗೆಯುವ ಚಕ್ರಕ್ಕೆ ಒಂಬತ್ತು ಹಲ್ಲುಗಳು. ಆ ಹಲ್ಲಿನಿಂದ ಸೃಷ್ಟಿಯಾಗುವ ನೂಲಿಗೆ ಆಧಾರವಾಗಿ ಲಾಳಿ ಇರುತ್ತದೆ. ಆ ಲಾಳಿಯಲ್ಲಿ ಮೂರು ಕೊಳವಿಗಳಿರುತ್ತವೆ. ಇದು ಭೌತಿಕ ಅರ್ಥ. ಇದರ ಅನ್ವೇಷಣೆಯಲ್ಲಿ ಮೊದಲಿನ ಗಿರಣಿಯ ಸ್ವರೂಪ ಹೀಗೆ ಇರಬಹುದು. ಆದರೆ, ಇದೊಂದು ತತ್ವಪದವಾದ ಕಾರಣ ದೇಹತತ್ವವನ್ನು ಕುರಿತು ಆಲೋಚಿಸಲು ಅವಕಾಶವಿದೆ.

ಇದು ಜೀವಾತ್ಮ ಕಥನ. ಜಲ, ಅಗ್ನಿ ಹಾಗೂ ವಾಯುಗಳು ಒಂದಾಗಿ ನೆಲದಿಂದ ಗಗನಕ್ಕೆ ಮುಟ್ಟುತ್ತವೆ. ಇವುಗಳನ್ನು ಪೃಥ್ವಿ, ಅಪ್, ತೇಜ, ಆಕಾಶ, ವಾಯುಗಳಿಂದ ಕೂಡಿದ ಪಂಚಮಹಾಭೂತಗಳಿಂದ ಜೀವಿಗೆ ರೂಪುಕೊಟ್ಟಿರುವುದನ್ನು ಕಾಣಬಹುದು. ಈ ಜೀವ ಕೇಂದ್ರಿತ ದೇಹವು ಒಂಬತ್ತು ರಂದ್ರಗಳಿಂದ ಕೂಡಿದೆ. ಅದನ್ನೆ ಶರೀಫರು ಒಂಬತ್ತು ದಳಗಳ ಚಕ್ರವೆಂದಿದ್ದಾರೆ. ಮೂರು ಕೊಳವೆಗಳೆಂದರೆ ಇಡಾ, ಪಿಂಗಲ ಹಾಗು ಸುಷುಮ್ನ ನಾಳಗಳು. ಇವುಗಳೊಳಗಿನ ಎಳೆಯೇ ಶ್ವಾಸೋಚ್ಛ್ವಾಸ ಎನ್ನಬಹುದು.

ಎಳೆಯನ್ನು ತುಂಬುವುದು ಎಂದರೆ ಜೀವದ ಎಲ್ಲಾ ಕ್ರಿಯೆಗಳನ್ನು ನಿಯಂತ್ರಿಸುವುದು ಎಂದರ್ಥ. ಈ ನಾಡಿಗಳಲ್ಲಿ ಚಲಿಸುವ ಶ್ವಾಸವು ಹತ್ತಿಯಂತೆ ಹಿಂಜಿ ಶುದ್ಧವಾಗುವ ಕ್ರಿಯೆ ಇಲ್ಲಿದೆ.

**ಅಲ್ಲಿ ಬರದಿಟ್ಟರಳಿ ಹಿಂಜಿ**
**ಅಲ್ಯಾದವು ಹಂಜಿ**
**ಅಲ್ಲಿ ಬರದಿಟ್ಟರಳಿ ಹಿಂಜಿ**
**ಗಾಲಿಯೆರಡರ ಮೇಲೆ ಮೂಲಬ್ರಹ್ಮದ ಶೀಲ**
**ನಾಡಿ ಸುಷುಮ್ನನು ಕೂಡಿ ಅಲ್ಲಾಯ್ತೋ ಕುಕ್ಕಡಿ ॥3॥**

ಸುಷುಮ್ನನಾಳದಲ್ಲಿ ಅಡಗಿದ ವಿಶಿಷ್ಟ ಶಕ್ತಿಯು ಮನುಷ್ಯ ಯಂತ್ರ ನಿರ್ಮಿಸಿದ ಶುದ್ಧಸಾರ. ಅದು ನಮ್ಮನ್ನು ಸದಾ ಕಾಪಾಡುತ್ತದೆ. ಇಲ್ಲಿ ಶುದ್ಧ ಹತ್ತಿಯನ್ನು ಹಿಂಜಲು ಎರಡು ಗಾಲಿಗಳು ಬೇಕು. ಆ ಗಾಲಿಯ ಮೂಲಕ ಹಿಂಜುತ್ತಾ ಒಂದು ಅಳತೆಯ ನೂಲಿನುಂಡೆಯನ್ನು ತಯಾರಿಸಬಹುದು ಎಂಬ ಸೂಕ್ಷ್ಮ ಇಲ್ಲಿದೆ. ಇದು ಯಂತ್ರದಿಂದಲೇ ನಿರ್ಮಿತವಲ್ಲ. ಕೈಮಗ್ಗದಲ್ಲೂ ಇದೇ ಸ್ವರೂಪ ಅಡಗಿದೆ. ಈ ಯಂತ್ರಗಳನ್ನು ಗಮನಿಸಿದರೆ, ಮನುಷ್ಯ ರೂಪಿತ ಯಂತ್ರದಾಕಾರಗಳಂತೆಯೇ ಕಾಣುತ್ತವೆ. ಈ ಪದವು ಮುಖ್ಯವಾಗಿ ಸುಷುಮ್ನ ನಾಳದಿ ಮೂಡುವ ಪರಮ ಬ್ರಹ್ಮಾಂಡ ಶಕ್ತಿಯನ್ನು ಕುರಿತು ಮಾತನಾಡುತ್ತಿದೆ. ನಿರ್ಗುಣ ಸ್ವರೂಪದ ಹತ್ತಿಯು ಮೂಲಬ್ರಹ್ಮವಿದ್ದಂತೆ. ಅದು ಇಡಾ ಮತ್ತು ಪಿಂಗಳಗಳೆಂಬ ಎರಡು ಗಾಲಿಗಳಲ್ಲಿ ಸಂಚರಿಸಿ ಶುದ್ಧ ಶ್ವಾಸವಾಗಿ ಸುಷುಮ್ನ ನಾಳದಲ್ಲಿ ಚಲಿಸುತ್ತಾ ಅದು ದಾರದ ಸ್ವರೂಪ ಪಡೆಯುತ್ತದೆ. ಅಂದರೆ, ತಾನು ಉಪಯೋಗಿ ಸಾಧನವಾಗುತ್ತದೆ. ಈ ನೂಲು ಹಲವು ಉಪಯೋಗಗಳ ಜೀವಶಕ್ತಿ ಅಂತಹ ಕಾರ್ಯಗಳ ಕುರಿತು ಚಿಂತನೆಯು ಇಲ್ಲಿದೆ.

**ಪರಮಾನೆಂಬುವ ಪಟ್ಟೇವೋ ಅಲ್ಲೆ**
**ಮಾರಾಟಕಿಟ್ಟೇವೋ**
**ಪರಮಾನೆಂಬುವ ಪಟ್ಟೇವೋ**
**ಧರೆಯೊಳು ಶಿಶುನಾಳ ದೇವಾಂಗ ಋಷಿಯಿಂದ**
**ನೇಸಿ ಹಚ್ಚಡ ಹೊಚ್ಚಿತೋ ಲೋಕ ಮೆಚ್ಚಿತೋ ॥4॥**

ಒಂದು ಯಂತ್ರ ತಯಾರಿಸುವುದು ಬಟ್ಟೆಯೇ ಆದರೂ, ಆ ಬಟ್ಟೆಯು ಜೀವದ್ರವ್ಯವಾಗುವ ವಿಚಾರವು ಇಲ್ಲಿ ಅಡಗಿದೆ. ಮೊದಲಿಗೆ ಅದರ ಸರಳ ಅರ್ಥದ ಕಡೆಗೆ ಗಮನ ನೀಡೋಣ. ಪಟ್ಟೆ ಅಂದರೆ, ರೇಷಿಮೆ ಸೀರೆ. ಪರಮಾ ಎನ್ನುವ ರೇಷಿಮೆ ಸೀರೆ. ಉರ್ದುನಲ್ಲಿ ಫರ್ಮಾನ್ ಎಂದರೆ ರಾಜಾಜ್ಞೆ ಎಂದರ್ಥ. ಆ ರಾಜಾಜ್ಞೆಯಂತೆ ಕಟ್ಟು ನಿಟ್ಟಿನ ಮೌಲ್ಯವಿರುವ ಬಟ್ಟೆಯೇ ರೇಷಿಮೆಯ ಸ್ವರೂಪ ಎಂದು ಕೂಡ ಭಾವಿಸಬಹುದು. ಆದರೆ, ಪರಮನೆಂದರೆ ದೇವರೆಂದು, ದಿವ್ಯವಾದುದೆಂದು ತಿಳಿದು, ದೇವರೆ ರೂಪಿಸಿದ ಬಟ್ಟೆ ಎಂದರಿಯಬಹುದು. ಈ ಭೂಮಿಯಲ್ಲಿ ಶಿಶುವಿನಾಳ

ದೇವಾಂಗ ಋಷಿಯಿಂದ ನೇಯ್ದ ಹಚ್ಚಡ(ಹೊದಿಕೆ)ವು ಈ ಲೋಕದ ಜನರ ಮಾನವನ್ನೆಲ್ಲಾ ಕಾಪಾಡುತ್ತದೆ. ಆದ್ದರಿಂದ ಈ ರೇಷಿಮೆಯ ಹೊದಿಕೆಯನ್ನು ಲೋಕ ಮೆಚ್ಚುತ್ತದೆ ಎಂಬ ಮೌಲ್ಯಯುತ ಚಿಂತನೆಗಳನ್ನು ಚರ್ಚಿಸಿದ್ದಾರೆ. ಅಂತಹ ಹೊದಿಕೆಗೆ ಯೋಗ್ಯವಾದ ಬಟ್ಟೆಯನ್ನು ಮಾರಾಟಕ್ಕಿಟ್ಟಿದ್ದೇವೆ ಎನ್ನುವುದು ಹಲವು ಚರ್ಚೆಗಳಿಗೆ ದಾರಿಯನ್ನು ಒದಗಿಸುತ್ತದೆ.

ಅತ್ಯಂತ ಶ್ರೇಷ್ಠವಾದ, ಮೌಲ್ಯಯುತವಾದ, ಲೋಕಮೆಚ್ಚುವ ನಮ್ಮ ಸ್ಥಳೀಯ ಸಂಪತ್ತನ್ನು ಗಿರಣಿಯು ಮೊದಲಿಗೆ ದೋಚಿತು. ಬೆಚ್ಚನೆಯ ಬಟ್ಟೆಗಳಿಗಾಗಿ ಹತ್ತಿ ಬೆಳೆದು ಗಿರಣಿಯಿಂದ ಶುದ್ಧಮಾಡಿ, ವಸ್ತ್ರಮಾಡಿ ನಾವು ವಿದೇಶಗಳಿಗೆ ಕಳಿಸುತ್ತಿದ್ದೇವೆ. ಪಾಶ್ಚಾತ್ಯ ಸೊಬಗಿಗೆ ಮಾರುಹೋದ ನಾವು ಅನಾರೋಗ್ಯಕರ ತುಂಡು ಬಟ್ಟೆಗಳನ್ನು ಶ್ರೀಮಂತಿಕೆ ಎಂದು ಭಾವಿಸಿದ್ದೇವೆ. ಇಂತಹ ಎಚ್ಚರಗಳು ಶತಮಾನಗಳ ಹಿಂದೆಯೇ ನಮ್ಮ ತತ್ವಪದಕಾರರು ನಮ್ಮೊಳಗೆ ಮೂಡಿಸಿದ್ದರು. ಗಿರಣಿಯು ಬರಿ ಯಂತ್ರವಲ್ಲ. ಆಧುನಿಕತೆಯ ಪ್ರತೀಕ. ಯಂತ್ರ ನಾಗರೀಕತೆಯೂ ಮನುಷ್ಯನ ದೈಹಿಕತೆಯನ್ನು ಕೊಲ್ಲುವ ಸೂಕ್ಷ್ಮರೂಪಕ. ಈ ಪದವು ತೆರೆದಿಡುವ ಅಂದಿನ ಸಾಮಾಜಿಕ ಹಾಗೂ ರಾಜಕೀಯ ಒತ್ತಡಗಳ ನಡುವೆ ದೇಹಮೀಮಾಂಸೆಯ ಇನ್ನೊಂದು ಅರ್ಥವು ನಮಗೆ ಬದುಕಿನ ಸಾಮರಸ್ಯವನ್ನು ಎಚ್ಚರಗೊಳಿಸುತ್ತದೆ.

"ಹೀಗೆ ಶರೀಫರು ರಾಜಕೀಯವನ್ನು, ಆಧುನಿಕತೆಯನ್ನು, ಅವು ಜನರ ಮೇಲೆ ಬೀರಿದ ಪರಿಣಾಮವನ್ನು ವಾಸ್ತವದ ನೆಲೆಯಲ್ಲಿ ನೋಡಿದರು, ಹುಬ್ಬಳ್ಳಿ ಶಹರದ ವಾಣಿಜ್ಯ ವ್ಯವಹಾರ, ಹೊಸತಾದ ನೂಲಿನ ಗಿರಣಿ, ಸರ್ಕಾರಿ ಶಾಲೆ, ಸೂಜಿ, ರೈಲು ಮುಂತಾದವುಗಳು ಯಂತ್ರಕ್ರಾಂತಿಯ ಆಧುನಿಕತೆಯನ್ನು ತೋರಿಸಿದರೆ, ಪ್ಲೇಗು, ಮಹಾಯುದ್ಧ, ತೆರಿಗೆ ವಸೂಲಾತಿಯಂಥ ವಿಷಯಗಳು, ಶರೀಫರ ಕಾಲಜ್ಞಾನವನ್ನು ತೋರಿಸುತ್ತವೆ. ಒಂದು ಕಡೆ ಆಧುನಿಕತೆ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಗಾಢವಾಗಿ ಹರಡಿಕೊಳ್ಳುತ್ತಲೇ ರಾಜ್ಯದಲ್ಲಿ ತೀವ್ರ ಬಡತನ, ಕಷ್ಟ ಕಾರ್ಪಣ್ಯ ಬರ ಇವುಗಳ ಚಿತ್ರಣವನ್ನು ಅವರ ಪದಗಳಲ್ಲಿ ಕಾಣುತ್ತೇವೆ. ಕನ್ನಡದ ಬದುಕು ಆಧುನಿಕತೆಗೆ ಮುಖ ಮಾಡುತ್ತಿರುವಾಗ ವಾಸ್ತವಿಕ ಬದಲಾವಣೆಗೆ ಶರೀಫರು ತೀವ್ರವಾಗಿ ಸ್ಪಂದಿಸಿದ್ದಾರೆ."[3] ದೇಹವು ಕೂಡ ಒಂದು ಮಾದರಿಯ ಗಿರಣಿ ಇದ್ದಂತೆ. ಇದು ಉಸಿರಾಟದ ಲಾಳಿಯಲ್ಲಿ ಸೃಷ್ಟಿಸಬಹುದಾದ ಸುಷುಮ್ನ ನಾಳದ ಶಕ್ತಿಯೇ ಜೀವದ್ರವ್ಯ. ಇಂತಹ ಶಕ್ತಿಯನ್ನು ಕೊಲ್ಲಲು ಬರುತ್ತಿರುವ ಯಂತ್ರ ನಾಗರೀಕತೆಯು ಸಾವಿರಾರು ರೋಗಗಳ ಜನಕನಂತೆ ಕಾಣಿಸುತ್ತದೆ. ದೇಹವಿರುವುದು ಸೌಂದರ್ಯಕ್ಕಲ್ಲ. ಅದು ದಂಡಿಸಿ, ದುಡಿದು ಆನಂದಿಸುವ, ನೆಮ್ಮದಿಯ ನಿದ್ರೆ ಸ್ವೀಕರಿಸುವ ಕ್ರಿಯಾತ್ಮಕ ಯಂತ್ರ ಸ್ವರೂಪ ಘಟಕ. ಅದನ್ನು ಸುಖ-ಭೋಗಗಳ ವಿಲಾಸಕ್ಕೆ ಸೀಮಿತಗೊಳಿಸಿರುವ ಸೋಮಾರಿತನವು ಇಂದಿನ ನಮ್ಮ ಜ್ಞಾನದ ಕೊಡುಗೆ. ಈ ವಿಚಾರಗಳನ್ನು ಮಾರ್ಮಿಕವಾಗಿ ಸಖ್ಯಭಾವದಲ್ಲಿ ಶರೀಫರು ನಮಗೆ ಮನದಟ್ಟುಮಾಡಿದ್ದಾರೆ.

## ಕೊನೆ ಟಿಪ್ಪಣಿಗಳು:

1. ಮಂಜುಳಾ ಅಶೋಕ್ ಕುಮಾರ್ ಮಲ್ಹಾರಿ, (2012), ಬೋಧ ಒಂದೇ ಬ್ರಹ್ಮನಾದ ಒಂದೇ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 07
2. ಅದೇ, ಪು.ಸಂ. 68
3. ಅದೇ, ಪು.ಸಂ. 69

## ಪರಾಮರ್ಶನ ಗ್ರಂಥಗಳು:

1. ಶಿವಾನಂದ ಗುಬ್ಬಣ್ಣನವರ (ಸಂ), (2002), ಶಿಶುನಾಳ ಶರೀಫ ಗೀತೆಗಳು, ಅಕ್ಷಯ ಪ್ರಕಾಶನ, ಧಾರವಾಡ.
2. ಮಂಜುಳಾ ಅಶೋಕ್ ಕುಮಾರ್ ಮಲ್ಹಾರಿ, (2012), ಬೋಧ ಒಂದೇ ಬ್ರಹ್ಮನಾದ ಒಂದೇ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
3. ಮೀನಾಕ್ಷಿ ಬಾಳೆ, (2006), ತನ್ನ ತಾನು ತಿಳಿದ ಮೇಲೆ, ವೀರೇಶ್ವರ ಪ್ರಕಾಶನ, ಜಮಖಂಡಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.